ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು NAME OF THE NEWS PAPER:
ದಿನಾಂಕ : DATE: 1/2/2020


# ಸಿಎಎ ಐತಿಹಾಸಿಕ ಸಾಧ

## ಸಂಸತ್‌ನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿ ಕೋವಿಂದ್ ಪ್ರಶ

ನವದೆಹಲಿ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪೌರತ್ವ ತಿದ್ದುಪಡಿ ಕಾಯ್ದೆ ಐತಿಹಾಸಿಕ ಸಾಧನೆ ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಬಣ್ಣಿಸಿದ್ದಾರೆ. ಸರ್ಕಾರ ಜಾರಿಗೊಳಿಸಿದ ಕಾಯ್ದೆಯಿಂದಾಗಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಕನಸು ನನಸಾಗಿದೆ ಎಂದಿರುವ ಅವರು, ಕಾಯ್ದೆ ವಿರೋಧಿಸಿ ದೇಶದ ಹಲವು ಭಾಗಗಳಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯನ್ನು ಟೀಕಿಸಿದ್ದಾರೆ.

ಶನಿವಾರ ವಿತ್ತ ಸಚಿವೆ 2020–21ನೇ ಸಾಲಿನ ಬಜೆಟ್ ಮಂಡಿಸಲಿದ್ದು ಶುಕ್ರವಾರ ಸಂಸತ್‌ನ ಅಧಿವೇಶನ ಶುರುವಾಯಿತು. ಮೊದಲ ದಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ, ಪರಸ್ಪರ ಮಾತುಕತೆ ಮತ್ತು ಚರ್ಚೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುತ್ತವೆ ಎಂದಿದ್ದಾರೆ. ಈ ದಶಕವನ್ನು ಭಾರತದ ದಶಕ, ಈ ಶತಮಾನವನ್ನು ಭಾರತದ ಶತಮಾನ ಎಂದು ಬದಲಾಯಿಸುವ ರೀತಿಯಲ್ಲಿ ಎಲ್ಲರೂ ಶ್ರಮ ವಹಿಸಬೇಕು ಎಂದರು.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಸಮರ್ಥಿಸಿದ ರಾಷ್ಟ್ರಪತಿ, ಭಾರತದಲ್ಲಿ ಎಲ್ಲಾ ಸಮುದಾಯಗಳು ಸಮಾನವಾಗಿ ಜೀವಿಸಲು ಅವಕಾಶ ಇದೆ. ಆದರೆ ದೇಶ ವಿಭಜನೆಯ ಸಂದರ್ಭದಲ್ಲಿ ನಮ್ಮ ದೇಶ ಮತ್ತು ನಂಬಿಕೆಯ ಮೇಲೆ ಭಾರಿ ಪೆಟ್ಟು ಬಿದ್ದಿತ್ತು. ಪಾಕಿಸ್ತಾನದಲ್ಲಿ ಜೀವಿಸಲು ಇಚ್ಛಿಸದ ಹಿಂದೂಗಳು ಮತ್ತು ಸಿಖ್ ಸಮುದಾಯದವರು ಭಾರತಕ್ಕೆ



ಸಂಸತ್ತಿಗೆ ಆಗಮಿಸುತ್ತಿರುವ ರಾಷ್ಟ್ರಪತಿ ಕೋವಿಂದ್, ಉಪರಾಷ್ಟ್ರಪತಿ ನಾಯ್ಡು, ಪ್ರಧಾನಿ ಮೋದಿ.

### ಪ್ರತಿಪಕ್ಷಗಳ ಪ್ರತಿಭಟನೆ

ರಾಷ್ಟ್ರಪತಿ ಕೋವಿಂದ್ ಭಾಷಣದ ವೇಳೆ 14 ಪ್ರತಿಪಕ್ಷಗಳ ನಾಯಕರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದ್ದಾರೆ. ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಯನ್ನು ಒಂದು ಸಾಧನೆ ಎಂದು ಬಿಂಬಿಸುವುದು ನಾಚಿಕೆಗೇಡು ಎಂದು ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ನಾಯಕರು ವಾದಿಸಿದ್ದಾರೆ. ವಿವಿಧ ಪ್ರತಿಪಕ್ಷಗಳು ಸಿಎಎ ಅಂಶವನ್ನು ಭಾಷಣದಿಂದ ತೆಗೆದು ಹಾಕುವ ಬಗ್ಗೆ ಗೊತ್ತುವಳಿ ಮಂಡಿಸುವ ಸಾಧ್ಯತೆ ಇದೆ.

### ಸಿಎಎ ಸಮರ್ಥಿಸಿ: ಎನ್‌ಡಿಎ ನಾಯಕರಿಗೆ ಪಿಎಂ ಮನವಿ

ಪೌರತ್ವ ಕಾಯ್ದೆಗೆ ಎನ್‌ಡಿಎ ನಾಯಕರು ಏಕಕಂಠದಿಂದ ಬೆಂಬಲ ನೀಡಬೇಕು ಎಂದು ಪ್ರಧಾನಿ ಮೋದಿ ಮನವಿ ಮಾಡಿದ್ದಾರೆ. ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಸದನದ ಒಳಗೆ ಕೈಗೊಳ್ಳಬೇಕಾದ ಚರ್ಚಾರ್ಹ ಅಂಶ ಮತ್ತು ಪ್ರತಿಪಕ್ಷಗಳ ಕಾರ್ಯವಿಧಾನಗಳಿಗೆ ತಿರುಗೇಟು ನೀಡುವ ಬಗ್ಗೆ ಎನ್‌ಡಿಎ ನಾಯಕರ ಸಭೆಯಲ್ಲಿ ಚರ್ಚಿಸಲಾಗಿದೆ.

ಬಂದು ವಾಸಿಸಬೇಕು ಎಂಬ ಇಚ್ಛೆ ಹೊಂ... ಆ ಸದಾಶಯ ಈಡೇರಿಸುವ ನಿಟ್ಟಿನಲ್ಲಿ ... ತಿದ್ದುಪಡಿ ಕಾಯ್ದೆ ಜಾರಿ ಮಾಡಲಾಗಿದೆ ...

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ... ಪ್ರಸ್ತಾಪ ಮಾಡಿದ ಅವರು, ... ಗುರುದ್ವಾರದಲ್ಲಿ ಏನಾಯಿತು ... ಎಲ್ಲರೂ ಅರಿತುಕೊಂಡಿದ್ದಾರೆ ಎಂದರು. ... ಸಮುದಾಯ ಈ ಬಗ್ಗೆ ಖಂಡನೆ ವ್ಯಕ್ತಪಡಿಸ... ಎಂದಿದ್ದಾರೆ.

ಅರ್ಥ ವ್ಯವಸ್ಥೆಯ ಬಗ್ಗೆ ಮಾತನಾಡಿದ ... 'ಉತ್ತಮ ನಾಳೆಗಳನ್ನು ಹೊಂದುವ ... ಜನರು ಸ್ಥಳೀಯವಾಗಿ ಉತ್ಪಾದಿಸಿದ ... ಬಳಕೆ ಮಾಡಬೇಕು. ಅದರ ಮೂಲಕ ... ಅರ್ಥ ವ್ಯವಸ್ಥೆಯನ್ನು 5 ಲಕ್ಷಕೋಟಿ ಡಾಲರ್... ಏರಿಸುವ ಗುರಿ ಸಾಧಿಸುತ್ತೇವೆ... ಎಂದಿದ್ದಾರೆ.

ಸಾಧನೆ: ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾ... ವಿಶೇಷ ಸ್ಥಾನಮಾನ ರದ್ದು ಮತ್ತು ... ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿ... ಕೊಂಡಾಡಿದ್ದಾರೆ. ಇದರಿಂದಾಗಿ ಜಮ್ಮು ... ಕಾಶ್ಮೀರ, ಲಡಾಖ್ ಎರಡೂ ಸಮನಾಗಿ ಅಭಿ... ಹೊಂದಲಿವೆ ಎಂದು ಅಭಿಪ್ರಾಯ... ಹಿಂದಿಯಲ್ಲಿ ರಾಷ್ಟ್ರಪತಿಗಳು 70 ನಿಮಿಷ... ಮಾತನಾಡಿದರು. ಅವರು ಎಪಿಆರ್, ಎನ್‌ಆರ್... ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ.